ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ, ನಾನು ಹುಟ್ಟಿದಾಗಿನಿಂದಲೂ ಕೋಲಾರ ಜಿಲ್ಲೆಯಲ್ಲಿ ೬೦ ಪರ್ಸೆಂಟ್ ವಸೂಲಾಗಿಲ್ಲ. ಹೀಗಾದರೆ ಬ್ಯಾಂಕ್‌ನ್ನು ಹೇಗೆ ನಡೆಸಬೇಕು ಈ ಸದನ ಬಾಕಿ ವಸೂಲು ಮಾಡುವುದು ಬೇಡವೆಂದು ಬೇಕಾದರೆ ತೀರ್ಮಾನ ಮಾಡಲಿ. ಹಣ ವಸೂಲಿ ಮಾಡದಿದ್ದರೆ ಸಾಲ ಎಲ್ಲಿಂದ ತರಬೇಕು ? ನಿರ್ವಾಹಕರು ಹಣ ವಸೂಲು ಮಾಡದಿದ್ದರೆ ಮತ್ತೆ ಸಾಲ ಕೊಡುವುದಿಲ್ಲ. ಈಗಾಗಲೇ ೨೦೦ ಕೋಟಿ ರೂಪಾಯಿ ಡಿಪಾಸಿಟ್ ಹಣ ಕೂಡ ಪಡೆಯಲಾಗಿದೆ. ನಾವು ಎಲ್ಲಾ ಕಡೆ ಸಾಲ ಮಾಡಿಯೂ ಸಹ ರೈತರು ಉದ್ಧಾರವಾಗಿಲ್ಲ. ಮತ್ತೆ ಇವರು ಉದ್ಧಾರವಾಗುವುದು ಯಾವಾಗ ? ಮಾನ್ಯ ಸದಸ್ಯರಾದ ತುಂಗಳ್‌ರವರು ಇದು ರೈತ ವಿರೋಧಿ ಸರ್ಕಾರವೆಂದು ಹೇಳಿದರು.

ಶ್ರೀ ಬಾಬುರೆಡ್ಡಿ ವಿ.ತುಂಗಳ್.—ನಾವಲ್ಲ, ರೈತರು ಹೇಳುತ್ತಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ರೈತ ಸಂಘದವರು ಹೇಳುತ್ತಿದ್ದಾರೆ, ನೀವಲ್ಲ ಕಳೆದ ನಾಲ್ಕು ವರ್ಷಗಳಲ್ಲಿ ಯಾವರೀತಿ ರೈತರೊಂದಿಗೆ ನಡೆದುಕೊಂಡು ಬಂದಿದ್ದೇವೆ. ಎಷ್ಟು ರಿಯಾಯಿತಿ ಕೊಟ್ಟಿದ್ದೇವೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಆದರೂ ಅವರು ಹೇಳಿದ್ದನ್ನು ನೀವು ಕೇಳುವುದಾದರೆ ಅದು ನಮ್ಮ ಗ್ರಹಚಾರ, ದುರಾದೃಷ್ಟ ಎಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗತಾನೆ ಮಾನ್ಯ ಮಂಖ್ಯಮಂತ್ರಿಗಳು ಅನೌನ್ಸ್ ಮಾಡಿದ್ದಾರೆ. ಬರಗಾಲ ಇರತಕ್ಕ ಪ್ರದೇಶಗಳಲ್ಲಿ.....

ಶ್ರೀ ಆರ್. ಎಲ್. ಜಾಲಪ್ಪ.— ಬರಗಾಲ ಇರುವ ಕಡೆ ಕನ್‌ವರ್ಷನ್ ಕೊಡುತ್ತಿದ್ದೇವೆ ಜಿಲ್ಲಾಧಿಕಾರಿಯವರು ಆರಾಣಿ ಬೆಳೆ ಎಲ್ಲಿ ಆಗಿಲ್ಲ ಅಂಥ ಕಡೆ ಸರ್ಟಿಫಿಕೇಟ್ ಕೊಟ್ಟರೆ ಕನ್‌ವರ್ಷನ್ ಕೊಡುತ್ತಿದ್ದೇವೆ. ಹೋದವರ್ಷ ನಿಯಮ ೧೦೧ಕ್ಕೆ ತಿದ್ದುಪಡಿ ತಂದು ಯಾವ ರೈತರ ಮನೆಗಳನ್ನು ಜಪ್ತಿ ಮಾಡಲಿಲ್ಲ. ದೊಡ್ಡ ರೈತರು ಮತ್ತು ಸಣ್ಣ ರೈತರ ಸ್ಥಿತಿ ಒಂದೇ ಆಗಿತ್ತು. ಈ ವರ್ಷವೂ ಹಾಗೆ ಮಾಡಿದರೆ ನನಗೇನು ಕೆಲಸ ಇರುವುದಿಲ್ಲ. ಸರ್ಕಾರದವರು ರೈತರಿಗಾಗಿ ತಮ್ಮ ಶಕ್ತಿ ಮೀರಿ ಸಹಾಯ ಮಾಡಿದ್ದಾರೆ ರೈತರಿಗೆ ಹಿಮಾಲಯ ಪರ್ವತ ತಂದು ಕೊಡುತ್ತೇವೆಂದು ಹೇಳುವಂಥ ಹುಂಬ ನಾನಲ್ಲ. ಅಲ್ಪ ಸ್ವಲ್ಪ ಸೇವೆ ಮಾಡಿದ್ದೇವೆ, ಹೆಚ್ಚು ಮಾಡುವುದಕ್ಕೆ ಶಕ್ತಿ ಇಲ್ಲ. ಇವತ್ತು ಸಾಲ ವಸೂಲು ಮಾಡದೇ ಇದ್ದರೆ ೫ ಬ್ಯಾಂಕುಗಳಲ್ಲೂ ಸಾಲ ಸಿಗುವುದಿಲ್ಲ. ೨ಳ ಪರ್ಸೆಂಟ್ ಬಡ್ಡಿ ಹಾಕುವ ಲೇವಾದೇವಿ ಮಾಡುವವರ ಹತ್ತಿರ ಇವರು ಬೇಕಾದರೆ ಹೋಗಲಿ, ೭ ಪರ್ಸೆಂಟ್ ಬಡ್ಡಿ ಮೇಲೆ ನಾವು ಸಹಾಯ ಮಾಡುತ್ತಿದ್ದೇವೆ. ಆದ್ದರಿಂದ ಶಕ್ತಿ ಇದ್ದವರು ದಯಮಾಡಿ, ವಾಪಸ್ಸು ಕೊಡಲಿ, ಮತ್ತೆ ಸಾಲ ಕೊಡುತ್ತೇವೆ. ರಿನ್ಯೂ ಮಾಡಿ, ೧೫ ದಿವಸದಲ್ಲಿ ವಾಪಸ್ಸು ಸಾಲ ತೆಗೆದುಕೊಳ್ಳಿ ಬಹುದು.

ಶ್ರೀ ಆರ್. ವೆಂಕಟರಾಮಯ್ಯ.— ಈ ಬಗ್ಗೆ ನಾನು ಹೇಳುವಂತಾದ್ದು ಇಷ್ಟೆ, ಜಪ್ತಿ ಮಾಡಲಿಕ್ಕೆ ಅಧಿಕಾರಿಗಳಿಗೆ ಯಾರು ಅಧಿಕಾರ ಕೊಟ್ಟಿದ್ದಾರೆ ? ಸಿ.ಪಿ.ಸಿ.ನಲ್ಲಿ ಕ್ಲಿಯರ್ ಆಗಿ ಹೇಳಿದ್ದಾರೆ. ಈಗ ಜಪ್ತಿ ಮಾಡತಕ್ಕದ್ದು ಬಹಳ ಅನ್ಯಾಯ. ಈ ರೀತಿ ಜಪ್ತಿ ಮಾಡತಕ್ಕದ್ದನ್ನು ತಪ್ಪಿಸಂತ್ತೀರಾ. ತಾವು ಯಾವಾಗಲೂ ಕಾನೂನು ಪ್ರಕಾರ ನಡೆದುಕೊಳ್ಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.— ಎಲ್ಲಾ ಮಾಡುವುದು ಕಾನೂನು ಪ್ರಕಾರವೇ ಬಡವರಿಗೆ ಯಾರೂ ತೊಂದರೆ ಕೊಡಬೇಡವೆಂದಿಲ್ಲ. ಆವರ ಹತ್ತಿರ ಏನು ಸಿಕ್ಕುತ್ತದೆ ? ಈಗ ೨೦ಸಾವಿರ, ೩೦ಸಾವಿರ ಹಾಗೂ ಲಕ್ಷಗಟ್ಟಲೆ ಬಾಕಿ ಇಟ್ಟುಕೊಂಡಿರುವವರನ್ನು ಬಿಟ್ಟುಬಿಡಿ ಎಂದು ತಾವು ಹೇಳುತ್ತಿರಾ ?

iii). ಬೆಂಗಳೂರು ನಗರ ಪಾಲಿಕೆಯ ಪ್ರತಿನಿಧಿಗಳ ಮೇಲೆ ಕೆಲವು ಅಧಿಕಾರಿಗಳು ದಬ್ಬಾಳಿಕೆ ನಡೆಸಿರುವುದು

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾ ನಗರ ಪಾಲಿಕೆಯ ಕೆಲವು ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳ ಮೇಲೆ ದೌರ್ಜನ್ಯ, ದಬ್ಬಾಳಿಕೆ ನಡೆಸಿದ ಬಗ್ಗೆ ಕಾನೂನು, ಸಂಸದೀಯ ವ್ಯವಹಾರಗಳು. ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಯವರ ಗಮನವನ್ನು ಸೆಳೆಯಂತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—ದಿನಾಂಕ ೨೭-೯-೧೯೮೫ ರಂದು ಮಾಡಿದ ಮಹಾ ನಗರ ಪಾಲಿಕೆ ಸಭೆಯಲ್ಲಿ ಶ್ರೀ ಕೆ.ನಾರಾಯಣಸ್ವಾಮಿಯವರು ಒಂದು ನಿರ್ಣಯವನ್ನು ಮಂಡಿಸಿ, ತಮ್ಮನ್ನು ವಿರೋಧಪಕ್ಷದ ನಾಯಕರೆಂದು ಪರಿಗಣಿಸಿ, ಇದಕ್ಕೆ ಅಗತ್ಯವಾದ ಕೊಠಡಿ, ದೂರವಾಣಿ ಮುಂತ್ತಿತರ ಸೌಲಭ್ಯಗಳನ್ನು ನೀಡಬೇಕೆಂದು ಕೋರಿದ್ದರು. ಸಭೆಯು ಸದರಿ ನಿರ್ಣಯವನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಆಯುಕ್ತರಿಗೆ ತಿಳಿಸಲಾಯಿತು. ಕೆ.ಎಂ.ಸಿ. ಕಾಯಿದೆಯಲ್ಲಿ ಈ ಸವಲತ್ತು ನೀಡುವ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಆದರೂ ಸಹ ಆಯುಕ್ತರು ಶ್ರೀ ಕೆ. ನಾರಾಯಣಸ್ವಾಮಿಯವರಿಗೆ ಒಂದು ಕೊಠಡಿ, ದೂರವಾಣಿ ಸಂಪರ್ಕಗಳು ಇತ್ಯಾದಿ ಸೌಲಭ್ಯಗಳನ್ನು ಕೊಟ್ಟರು.

ದಿನಾಂಕ ೨೭-೨-೧೯೮೭ ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ಡಿ.ಎಂ.ಕೆ, ಎ.ಐ.ಡಿ.ಎಂ.ಕೆ, ಬಿ.ಜೆ.ಪಿ. ಮುಂತಾದ ಪಕ್ಷಗಳು ಸೇರಿ ಶ್ರೀ ನಾರಾಯಣಸ್ವಾಮಿ ವಿರೋಧ ಪಕ್ಷಗಳ ನಾಯಕರಲ್ಲವೆಂದು ಅವರು ಕಾಂಗ್ರೆಸ್(ಐ) ಪಕ್ಷದ ನಾಯಕರು ಮಾತ್ರವೇದು ತಿಳಿಸಿದರು. (ಈ ಸಂದರ್ಭದಲ್ಲಿ ಕಾಂಗ್ರೆಸ್ (ಐ) ಸದಸ್ಯರು ಸಭಾತ್ಯಾಗ ಮಾಡಿದರು) ನಂತರ ನಗರ ಸಭೆಯು ಸರ್ವಾನು ಮತದಿಂದ ಶ್ರೀ ಕೆ. ನಾರಾಯಣಸ್ವಾಮಿಯವರಿಗೆ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ನೀಡಲಾಗಿರುವ ಸವಲತ್ತುಗಳಾದ ಕೊಠಡಿ, ದೂರವಾಣಿ ಮುಂತಾದವುಗಳನ್ನು ಆ ದಿನದಿಂದಲೇ ರದ್ದುಪಡಿಸಬೇಕೆಂದು ತೀರ್ಮಾನಿಸಲಾಯಿತು.

ಈ ನಿರ್ಣಯದ ಮೇರೆಗೆ ನಗರ ಪಾಲಿಕೆಯ ಆಯುಕ್ತರು ದಿನಾಂಕ ೨-೩-೧೯೮೭ ರಂದು ಆದೇಶ ಹೊರಡಿಸಿ ಕೊಠಡಿಯನ್ನು ತೆರವು ಮಾಡಲು ತಿಳಿಸಿದರು. ಈ ಆದೇಶವನ್ನು ಆದಿನ ಜಾರಿ ಮಾಡಲು ಹೋದಾಗ ಶ್ರೀ ನಾರಾಯಣಸ್ವಾಮಿಯವರು ಅದನ್ನು ಪಡೆಯದೆ ತಿರಸ್ಕರಿಸಿದ್ದರು. ನಂತರ ದಿನಾಂಕ ೩-೩-೮೭ ರಂದು ಪ್ರಧಾನ್ಯಹ್ನ ೧೨-೩೦ರ ಸಮಯದಲ್ಲಿ ಅವರ ಕೊಠಡಿಗೆ ಆದೇಶವನ್ನು ಅಂಟಿಸಿ ಬೀಗಮುದ್ರೆ ಮಾಡಿ ಅಧಿಕಾರಿಗಳು ಹೊರಡುವ ಸಮಯದಲ್ಲಿ ಹಠಾತ್ತನೆ ಶ್ರೀ ನಾರಾಯಣಸ್ವಾಮಿಯವರು ಹಾಜರಾಗಿ, ಅಲ್ಲಿ ಹಾಜರಿದ್ದ ಉಪ-ಆಯುಕ್ತರು (ಆಡಳಿತ), ಕೌನ್ಸಿಲ್ ಕಾರ್ಯದರ್ಶಿ, ಸಹಾಯಕ ಕಾನೂನು ಅಧಿಕಾರಿ, ಕಾರ್ಯನಿರ್ವಾಹಕ ಅಭಿಯಂತರರು, ಆಧಿಕ ಕೌನ್ಸಿಲ್ ಕಾರ್ಯದರ್ಶಿ ಮುತ್ತಿತರ ಅಧಿಕಾರಿಗಳನ್ನು ಪ್ರಚೋದನೆ ಇಲ್ಲದೆ ಅವಾಚ್ಯ ಶಬ್ದಗಳಿಂದ ಬೈಯ್ದಿದ್ದಲ್ಲದೆ ಕೌನ್ಸಿಲ್ ಕಾರ್ಯದರ್ಶಿಯವರ ಕೆನ್ನೆಗೆ ಹೊಡೆದುಬಿಟ್ಟರು ನಂತರ ಬೀಗ ಮುದ್ರೆಯನ್ನು ಕಿತ್ತು ಹಾಕಿದರು ಹಾಗೂ ಬೀಗ ಮುರಿಯಲು ಪ್ರಯತ್ನಿಸಿದರು. ಇಷ್ಟಾದರೂ ಕೂಡ ಮೇಲ್ಕಂಡ ಅಧಿಕಾರಿಗಳು ಸ್ಥಿಮಿತ ಕಳೆದುಕೊಳ್ಳಲಿಲ್ಲ. ಈ ಹಲ್ಲೆಯನ್ನು ಕಂಡ ನಗರ ಪಾಲಿಕೆ ಕೇಂದ್ರ ಕಛೇರಿಯ ಎಲ್ಲಾ ನೌಕರರು ಹಠಾತನೆ ಪ್ರತಿಭಟನೆ ಸೂಚಿಸಿ, ಇಂತಹ ಪ್ರಸಂಗಗಳಿಂದ ತಮಗೆ ರಕ್ಷಣೆ ನೀಡಬೇಕೆಂದು ಘೋಷಣೆಗಳನ್ನು ಕೂಗಿದರು. ಆಯುಕ್ತರು ಮತ್ತು ಮೇಯರ್‌ರವರು ನೌಕರರನ್ನು ಸಮಾಧಾನ ಪಡಿಸಿ ಕಛೇರಿಗಳಿಗೆ ವಾಪಸ್ ಕಳುಹಿಸಿದರು. ಕಾನೂನಿನ ಪ್ರಕಾರ ಕಾರ್ಯನಿರತ ನೌಕರರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹೊಡೆದಿದ್ದಕ್ಕೆ ಪೊಲೀಸರಿಗೆ ದೂರು ಕೊಡಲಾಗಿದೆ. ಶ್ರೀ ನಾರಾಯಣಸ್ವಾಮಿಯವರು ಕೂಡ ಪೋಲಿಸರಿಗೆ ದೂರು ಕೊಟ್ಟಿದ್ದಾರೆಂದು ತಿಳಿದುಬಂದಿದೆ. ಪುನಃ ಅವರಿಗೆ ವಿರೋಧ ಪಕ್ಷದ ನಾಯಕರ ಸ್ಥಾನಮಾನವನ್ನು ಕೊಡುವುದು ಬಿಡುವುದು ಮಹಾ ನಗರ ಪಾಲಿಕೆಗೆ ಸಂಬಂಧಪಟ್ಟಿದ್ದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೆ, ಈ ಕಾನೂನಿನಲ್ಲಿ ಅವರು ವಿರೋಧ ಪಕ್ಷದ ನಾಯಕರಲ್ಲ ಎಂಬುದನ್ನು ಪೆನ್‌ಷನ್ ಮಾಡಿಲ್ಲ. ಇವರು ಹೇಳಿದಂತೆ ಬಿ.ಜೆ.ಪಿ ಯವರು ೪ ಜನ, ಇಂಡಿಪೆಂಡೆಂಟ್ ಒಬ್ಬರು, ಡಿ.ಎಂ.ಕೆ ಯವರು ಇಬ್ಬರು, ಸಿ.ಪಿ.ಎಂ.ನವರು ಇಬ್ಬರು,ಎ.ಡಿ.ಎಂ.ಕೆ. ಯವರು ೭ ಜನ ಇದ್ದರು.ಇವರು ಇಷ್ಟುಜನರೂ ವಿರೋಧ ಪಕ್ಷಕ್ಕೆ ಸೇರಿದವರು. ಎ.ಡಿ.ಎಂ.ಕೆ. ಯವರು ಅಲಯನ್ಸ್. ಅವರು ಆ ಕಡೆಗೂಉಂಟು. ಈ ಕಡೆಗೂ ಉಂಟು ಕಾಂಗ್ರೆಸ್‌ನವರು ವಾಕೌಟ್‌ಮಾಡಿದ್ದಾಗ ಜನತಾ ಪಕ್ಷದವರೂ ಮತ್ತು ಮೇಯರ್‌ರವರೂ ಸೇರಿ ಕೊಂಡು ಈ ಒಂದು ರೆಸಲ್ಯೂಷನ್‌ನ್ನು ಪಾಸ್ ಮಾಡಿದ್ದಾರೆ. ಕಳೆದ ಎರಡುವರ್ಷದಿಂದ ವಿರೋಧ ಪಕ್ಷದ ನಾಯಕರ ಸ್ಥಾನವನ್ನು ಅಲ್ಲಿ ಕೊಟ್ಟಿದ್ದು ಈಗ ಅದು ಕಾನೂನಿನಲ್ಲಿ ಇಲ್ಲ ಎಂದು ಹೇಳುತ್ತಿದ್ದಾರೆ. ಕಾನೂನಿನಲ್ಲಿ ಇಲ್ಲದಿದ್ದರೂ ಕನ್‌ವೆನ್‌ಷನ್ ಪ್ರಕಾರ ಇವರಿಗೆ ಕೊಡಬೇಕಾಗುತ್ತದೆ. ಯಾವುದೇ ಪಕ್ಷವಾಗಲಿ, ಅತಿ ಹೆಚ್ಚಿನ ಸದಸ್ಯರನ್ನು ಹೊಂದಿರುವ ಪಕ್ಷವೇ ವಿರೋಧ ಪಕ್ಷವಾಗಿ ಮಾನ್ಯತೆ ಪಡೆ

ಯುತ್ತದೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಕನ್‌ವೆನ್‌ಷನ್ ಪ್ರಕಾರ ಯಾರು ವಿರೋಧ ಪಕ್ಷದ ನಾಯಕರಾಗಿರುತ್ತಾರೆ ಅವರಿಗೆ ಒಂದು ಕೊಠಡಿ, ಫೋನ್ ಮುಂತಾದ ಅನುಕೂಲಗಳನ್ನು ಕೊಡಬೇಕಾಗುತ್ತದೆ. ಅದರಂತೆ ಕಾರ್ಪೊರೇಷನ್‌ನಲ್ಲೂ ಕೊಟ್ಟಿದ್ದರು. ಅಲ್ಲಿನ ವಿರೋಧಪಕ್ಷದ ನಾಯಕರು ತಮ್ಮ ಕೊಠಡಿಯಲ್ಲಿ ಹಣ, ಪೇಪರ್, ಇನ್ನೂ ಮುಂತಾದುವನ್ನೆಲ್ಲಾ ಇಟ್ಟು ಹೋಗಿದ್ದರು. ಆ ಕೊಠಡಿಯಲ್ಲಿ ಬೇರೆ ಕೆಲವು ಜನರೂ ಕೂತಿದ್ದರು. ಆ ಸಂದರ್ಭದಲ್ಲಿ ಕಾರ್ಪೊರೇಷನ್ ಆಫೀಸರ್ಸ್ ಹೋಗಿ ನೀವೆಲ್ಲರೂ ಹೊರಗಡೆ ಹೋಗಿ, ನಾವು ಆ ಕೊಠಡಿಯನ್ನು ಸೀಲ್ ಮಾಡಬೇಕೆಂದು ಹೇಳಿದ್ದಾರೆ. ಆಗ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ನಾರಾಯಣ ಸ್ವಾಮಿಯವರು ಅಲ್ಲಿಗೆ ಬಂದು ನನಗೆ ನೋಟೀಸ್ ಬಂದಿಲ್ಲ, ನನಗೆ ನೋಟೀಸ್‌ನ್ನು ಕೊಟ್ಟು ಆನಂತರ ಸೀಲ್ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಆಗ ಆ ಅಧಿಕಾರಿಗಳು ನಾರಾಯಣಸ್ವಾಮಿಯವರ ಮೇಲೆ ಕೈ ಮಾಡಿದ್ದಾರೆ. ನಂತರ ಕಾರ್ಪೊರೇಷನ್ ಅಧಿಕಾರಿಗಳೂ ಪೋಲಿಸ್ ಸ್ಟೇಷನ್‌ಗೆ ದೂರು ಕೊಟ್ಟಿದ್ದಾರೆ, ನಾರಾಯಣಸ್ವಾಮಿಯವರೂ ದೂರು ಕೊಟ್ಟಿದ್ದಾರೆ. ಕಾರ್ಪೊರೇಷನ್‌ನಲ್ಲಿ ಒಬ್ಬ ಚುನಾಯಿತ ಪ್ರತಿನಿಧಿಗೆ ಅದರಲ್ಲೂ ವಿರೋಧಪಕ್ಷದ ನಾಯಕನಿಗೆ ಈ ರೀತಿ ಅವಹೇಳನ ಮಾಡಿರತಕ್ಕದ್ದಲ್ಲ, ಅಪಮಾನ ಮಾಡಿರತಕ್ಕದ್ದಲ್ಲ, ಕಾರ್ಪೊರೇಷನ್‌ನವರಿಗೆ ತರವಲ್ಲ. ಇದು ದುರದೃಷ್ಟಕರ ಸಂಗತಿ ಆದ್ದರಿಂದ ನಾನಾದರೂ ಹೇಳುತ್ತೇನೆ, ಮೊದಲು ವಿರೋಧಪಕ್ಷದ ನಾಯಕರನ್ನು ರೀ ಇನ್‌ಸ್ಟೇಟ್ ಮಾಡಿ, ಅವರಿಗೆ ಕೊಡಬೇಕಾದ ಅಧಿಕಾರವನ್ನೂ, ಅವರಿಗೆ ಸಲ್ಲಬೇಕಾದ ಎಲ್ಲ ಸೌಲಭ್ಯಗಳನ್ನೂ ಕೊಡಲೇ ಕೊಡಿಸಿಕೊಡಬೇಕೆಂದು ಹೇಳಬಯಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).—ಮಾನ್ಯ ಅಧ್ಯಕ್ಷರೆ, ಕಳೆದ ತಿಂಗಳ ೨೭ನೇ ತಾರೀಖು ಶ್ರೀ ಮಾನ್ ನಾರಾಯಣಸ್ವಾಮಿಯವರನ್ನು ವಿರೋಧ ಪಕ್ಷದ ನಾಯಕತ್ವದಿಂದ ತೆಗೆದುಹಾಕಬೇಕೆಂದು ಒಂದು ರೆಸಲ್ಯೂಷನ್ ಪಾಸ್ ಮಾಡಿದರಂ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಈ ಕಾರ್ಪೊರೇಷನ್‌ನಲ್ಲಿ ಬಹಳ ಹಿಂದಿನಿಂದಲೂ ಒಂದು ಕನ್‌ವೆನ್‌ಷನ್‌ನ್ನು ಹಾಕಿಕೊಂಡು ಬಂದಿದ್ದಾರೆ. ಮಾನ್ಯ ಸಚಿವರಾದ ಲಕ್ಷ್ಮೀಸಾಗರ್‌ರವರು ಹಿಂದೆ ಕಾರ್ಪೊರೇಷನ್‌ನಲ್ಲಿ ವಿರೋಧಪಕ್ಷದ ನಾಯಕರಾಗಿದ್ದಾಗಲೂ ಕೂಡ ಇವರಿಗೆ ಒಂದು ಪ್ರತ್ಯೇಕ ಕೊಠಡಿ, ಫೋನು, ಮತ್ತಿತರ ಸೌಲಭ್ಯಗಳನ್ನು ಕೊಡಲಾಗಿತ್ತು ಎಂದು ನಾನು ಕೇಳಿದ್ದೇನೆ. ಇವರ ನಂತರ ಮಾಜಿ ವಿಧಾನ ಸಭಾ ಸದಸ್ಯರಾದ ಪಿ. ರಾಮದೇವ್‌ರವರು ವಿರೋಧಪಕ್ಷದ ನಾಯಕರಾಗಿದ್ದಾಗ ಕೂಡ ಅವರಿಗೆ ಪ್ರತ್ಯೇಕ ಕೊಠಡಿ, ಫೋನ್, ಮತ್ತಿತರ ಸೌಲಭ್ಯಗಳನ್ನು ಕೊಡಲಾಗಿತ್ತು ಎಂದು ಕೇಳಿದ್ದೇನೆ. ಇವತ್ತು ಕಾರ್ಪೊರೇಷನ್ ಸಭೆಯಲ್ಲಿ ಸಿಂಗಲ್ ಲಾರ್ಜೆಸ್ಟ್ ಪಾರ್ಟಿ ಎಂದರೆ ಕಾಂಗ್ರೆಸ್ (ಐ) ಪಕ್ಷ. ಈ ಪಕ್ಷದ ಪರವಾಗಿ ಯಾರು ನಾಯಕರಾಗಿರುತ್ತಾರೆ, ಅವರಿಗೆ ಈ ಎಲ್ಲ ಸೌಲಭ್ಯಗಳನ್ನೂ ಕಳೆದ ೨ ವರ್ಷಗಳಿಂದಲೂ ಕೊಟ್ಟಿದ್ದರು. ಬೇರೆಯವರು ಯಾರೋ ಈ ರೀತಿ ಒಂದು ರೆಸಲ್ಯೂಷನ್‌ನ್ನು ಮೂವ್ ಮಾಡಿ ಇವರನ್ನು ವಿರೋಧ ಪಕ್ಷದ ನಾಯಕತ್ವದಿಂದ ಹೆಗೆದುಹಾಕಬೇಕೆಂದು ಹೇಳಿದ್ದರಿಂದ, ಈ ರೀತಿ ಮಾಡಿ ತೆಗೆದುಹಾಕಿದ್ದೇವೆಂದು ತಾವು ಹೇಳುವುದಾದರೆ ಇನ್ನು ಯಾವರೀತಿ ನೀವು ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡಂತ್ತಿದ್ದೀರೆಂಬುದನ್ನು ನಾವು ಯೋಚನೆ ಮಾಡಬೇಕಾಗಂತ್ತದೆ. ಇವರನ್ನು ತೆಗೆದುಹಾಕಬೇಕೆಂದು ಒಟ್ಟಾಗಿ ಯಾರೂ ಬರೆದು ಕೊಟ್ಟಿಲ್ಲ, ಬರೆದುಕೊಟ್ಟಮೇಲೆ ಅವರನ್ನು ಕಾರ್ಪೊರೇಷನ್ ಆಕ್ಟ್ ಪ್ರಕಾರ, ಕಾನೂನು ಪ್ರಕಾರ ತೆಗೆದು ಹಾಕುತ್ತಿದ್ದೇವೆಂದು ಹೇಳತಕ್ಕದ್ದೂ ಇದರಲ್ಲಿ ಇಲ್ಲ. ಕನ್‌ವೆನ್‌ಷನ್ ಪ್ರಕಾರ ಲಾರ್ಜೆಸ್ಟ್ ಪಾರ್ಟಿ ಯಾವುದಂ ಇದೆ, ಅದರಲ್ಲಿ ಯಾರು ಆರಿಸಿ ಬಂದಿದ್ದಾರೆ ಅವರನ್ನು ನೀವು ವಿರೋಧ ಪಕ್ಷದ ನಾಯಕರು ಎಂದು ಮಾನ್ಯತೆ ಮಾಡಿದ್ದೀರಿ. ಆದರೆ ಇವತ್ತು ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ನಡೆದಿರಂವಂಥ ಅನ್ಯಾಯಗಳನ್ನು ಎತ್ತಿ ಹಿಡಿದು ತೋರಿಸಿದಾಗ...

ಅಧ್ಯಕ್ಷರು.—ನಿಮಗೆ ಸಚಿವರಿಂದ ಉತ್ತರ ಬಂದಿದೆ ಅದರ ಮೇಲೆ ವಿವರಣೆ ಏನು ಬೇಕೋ ಅದನ್ನು ಮಾತ್ರ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ರೂಲ್ ೬೮ ರಲ್ಲಿ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಎರಡೂವರೆ ಗಂಟೆಗಳ ಕಾಲದ ಚರ್ಚೆ ಮಾಡುವುದಕ್ಕೆ ನಾವು ಅವಕಾಶವನ್ನು ಕೊಟ್ಟಿದ್ದರೆ, ನಾನು ಎಲ್ಲ ವಿಚಾರಗಳನ್ನೂ ಸವಿಸ್ತಾರವಾಗಿ ಹೇಳುತ್ತಿದ್ದೆ. ಮಾನ್ಯ ಮೇಯರ್‌ರವರು ಏತಕ್ಕೆ ಆಷ್ಟು ಸಿಟ್ಟಿಗೆ ಬಂದರು ? ಅವರು ಏತಕ್ಕೆ ಈ ರೀತಿ ಕ್ರಮವನ್ನು ತೆಗೆದುಕೊಂಡರು ? ಅವರು ಏತಕ್ಕೆ ಇಷ್ಟು ಇನ್ ಹ್ಯೂಮನ್ ಆಗಿ, ಅನ್ ಡೆಮಾಕ್ರೆಟಿಕ್ ಆಗಿ ನಡೆದುಕೊಂಡರು ಎಂಬುದನ್ನೆಲ್ಲಾ ನಾವು ಹೇಳುತ್ತಿದ್ದೆವು.

ಪ್ರಾಪರ್ಟಿ ಟ್ಯಾಕ್ಸ್‌ನ್ನು ಹೆಚ್ಚು ಮಾಡಿದ್ದರಿಂದ ಅದನ್ನು ಇವರು ಪ್ರತಿಭಟಿಸಿ ಜನರನ್ನು ಪ್ರೊಟೆಸ್ಟ್ ಮಾಡುವಂತೆ ಮಾಡಿದಾಗ ಇದು ನಮ್ಮ ಮೇಲೆ ಎಲ್ಲಿ ಬಿದ್ದು ಬಿಡುತ್ತದೋ ಎಂಬ ದೃಷ್ಟಿಯಿಂದ.. ...

ಅಧ್ಯಕ್ಷರು.—ನಿಮಗೆ ಏನು ಕ್ಲಾರಿಫಿಕೇಷನ್ ಬೇಕೋ ಅದನ್ನು ಕೇಳಿ. ನಿಮ್ಮದು ವಿವರಣೆಯೋ ಅಥವಾ ಭಾಷಣವೋ ಎಂಬುದು ಗೊತ್ತಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ನಾನು ವಿವರಣೆಯನ್ನು ಕೇಳುತ್ತಿರುವುದು ಈ ಬೆಂಗಳೂರು ಕಾರ್ಪೊರೇಷನ್‌ಗೆ ಸಂಬಂಧಪಟ್ಟಂತೆ ಗುಲ್ಬರ್ಗಾ ಕಾರ್ಪೊರೇಷನ್ ಬಗ್ಗೆ ನಾನು ಕೇಳುತ್ತಿಲ್ಲ. ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು.

SRI M. RAGHUPATHY.—I am on a point of order.

SRI M. MALLIKARJUNA KHARGE.—I am on my legs.

MR. SPEAKER.—He is raising a point of order.

SRI M. RAGHUPATHY.—According to our Rules, a point of Order is defined thus.—

> "A Point of order shall relate to the interpretation or enforcement of these rules of such articles of the constitution as regulate the business of the House and shall raise a question which is within the cognizance of the Speaker."

ಇದನ್ನು ಅಡ್ಮಿಟ್ ಮಾಡಿದ್ದೆ ತಪ್ಪು ಎಂದು ನಾನು ಹೇಳುತ್ತೇನೆ. ಏತಕ್ಕೆಂದರೆ ಕಾರ್ಪೊರೇಷನ್ ಎಂದರೆ ಅದು ಒಂದು ಆಟಾನಮಸ್ ಬಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ —ಮಾನ್ಯ ಅಧ್ಯಕ್ಷರೇ,ಅವರು ನಿಮ್ಮನ್ನೇ ಪ್ರಶ್ನೆ ಮಾಡುತ್ತಿದ್ದಾರೆ. ನಿಮಗೆ ಬುದ್ಧಿ ಹೇಳುವುದಕ್ಕೆ ಬರುತ್ತಿದ್ದಾರೆ. ನೀವು ಕೊಟ್ಟಂಥ ರೂಲಿಂಗ್‌ನ್ನು ಪ್ರಶ್ನೆ ಮಾಡುತ್ತಿದ್ದಾರೆ. ಆದ್ದರಿಂದ ನಿಮ್ಮ ಮಾತನ್ನು ಕೇಳದಿರುವ ಸದಸ್ಯರು ನಮ್ಮ ಮಾತನ್ನು ಕೇಳುತ್ತಾರೆಯೇ?

MR. SPEAKER.—Legislature is supreme.

ಶ್ರೀ ಎಂ. ರಘುಪತಿ.—ನನ್ನ ಪಾಯಿಂಟ್ ಆಫ್ ಆರ್ಡರ್ ತಪ್ಪಿದ್ದರೆ ತಪ್ಪಿದೆ ಎಂದು ಹೇಳುತ್ತಾರೆ. ತಪ್ಪು ಎಂದರೆ ನಾನು ಕಂಡಿತುಕೊಳ್ಳುತ್ತೇನೆ. He has got every right to regulate us.

SRI M. MALLIKARJUNA KHARGE.—But you have no right to cast any aspersions on the Speaker.

SRI M. RAGHUPATHY.—I am not casting any aspersions. Corporation is an autonomous body. ಕಾರ್ಪೊರೇಷನ್‌ನಲ್ಲಿ ನಡೆಯುವ ವಿಧ್ಯಮಾನಗಳನ್ನು ಅಲ್ಲೇ ಚರ್ಚೆ ಮಾಡಿ ಮಿನಿಸ್ಟರಿಗೆ ಕನ್‌ವೇ ಮಾಡಬಹುದು. ಲೀಡರ್‌ನ್ನು ತೆಗೆಯುವುದು ಲೀಡರ್‌ನ್ನು ಎಲೆಕ್ಟ್ ಮಾಡುವುದು ಮೇಯರ್‌ನ್ನು ತೆಗೆಯುವುದು ಇದೆಲ್ಲಾ ಅಲ್ಲಿ ರೆಸಲ್ಯೂಷನ್ ಪೂರ್ವಕ ನಡೆಯುತ್ತದೆ ಕಾರ್ಪೊರೇಷನ್‌ನಲ್ಲಿಯೇ ಅದನ್ನು ಡಿಸ್‌ಕಸ್ ಮಾಡಬೇಕೇ ಹೊರತು ಇಲ್ಲಿ ಅಲ್ಲ. ಅದನ್ನು ಬಿಟ್ಟು ಇನ್ನೇನಾದರೂ ಹೆರಾಸ್‌ಮೆಂಟ್ ಆಗಿದ್ದರೆ,ಅದನ್ನು ಡಿಸ್‌ಕಸ್ ಮಾಡಲಿ. ಅದನ್ನು ನಾನು ಇಲ್ಲಿ ಮೂಲಭೂತವಾಗಿ ಹೇಳುತ್ತಿರುವುದು. ಆದ್ದರಿಂದ ಈ ಸದನದಲ್ಲಿ ಲೀಡರ್ ಆಫ್ ದಿ ಆಪೋಸಿಷನ್ ತೆಗೆದದ್ದು ಆಗಲಿ, ನೇಮಕ ಮಾಡಿದ್ದಾಗಲಿ ಈ ಸದನದಲ್ಲಿ ಚರ್ಚೆ ಮಾಡುವುದು ನೈಜವಲ್ಲವೆಂದು ಹೇಳುತ್ತೇನೆ.

ಶ್ರೀ ಬಿ.ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ತಾವು ಗಮನ ಸೆಳೆಯುವ ಸೂಚನೆಗೆ ಸಹಿ ಹಾಕಿಲ್ಲ. ಆದ್ದರಿಂದ ತಾವು ವಿವರಣೆಯನ್ನು ಕೇಳುವುದಕ್ಕೆ ಅವಕಾಶವಿಲ್ಲ. ಮಾನ್ಯ ಸದಸ್ಯರು ಕಾಲಿಂಗ್ ಅಟೆನ್‌ಷನ್ ವಿಚಾರವನ್ನು

ಎತ್ತಿರುವುದು ಔಟ್ ಆಫ್ ದಿ ವೇ ಅಲ್ಲ, ಅದು ಕಾರ್ಪೊರೇಷನ್ ಇದ್ದರೂ, ಕೋಟಿಗಟ್ಟಲೇ ಹಣವನ್ನು ಸರ್ಕಾರ ಗ್ರಾಂಟ್ ಎಂದು ಕೊಡುವಾಗ, ನಿಮಗೆ ಹಕ್ಕಿಲ್ಲವೆಂದು ಹೇಳುವುದು ಸರಿಯಾಗಿ ಕಾಣುವುದಿಲ್ಲ. ಆದರೆ ಕ್ಲಾರಿಫಿಕೇಷನ್ ಕೇಳಬೇಕೇ ಹೊರತು ಭಾಷಣವನ್ನು ಮಾಡಲಿಕ್ಕೆ ಅವಕಾಶವಿಲ್ಲ.

SRI M. MALLIKARJUNA KHARGE.—No point and no order.

ಶ್ರೀ ಎಂ. ರಘುಪತಿ.—ಶ್ರೀ ಖರ್ಗೆಯವರು ನಮ್ಮ ಕಡೆ ಇದ್ದಿದ್ದರೆ ನನಗಿಂತ ಹೆಚ್ಚು ಹೇಳುತ್ತಿದ್ದರು.

ಅಧ್ಯಕ್ಷರು.—ಕ್ಲಾರಿಫಿಕೇಷನ್ ಅಷ್ಟೇ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನ್ ಅಥರೈಸ್ಡ್ ಕನ್ಸ್ಟ್ರಕ್ಷನ್ಸ್ ಹಾಗೂ ಇನ್ನೂ ಅನೇಕ ಕಾರಣಗಳಿಂದ ಮೇಯರ್...

ಅಧ್ಯಕ್ಷರು.—ಭಾಷಣ ಮಾಡುವುದಕ್ಕೇ ಹೊರಟಿರಿ. ಏನಾಗಬೇಕು ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವೈಯಂಕ್ತಿಕ ಸಿಟ್ಟನ್ನು ಅಪೋಸಿಷನ್ ಲೀಡರ್ ಮೇಲೆ ತೆಗೆದುಕೊಂಡು ಜನತಾ ಪಕ್ಷದ ಕೌನ್ಸಿಲರ್ ಅನ್ನು ಸೇರಿಸಿ ಈ ಒಂದು ನಿರ್ಣಯವನ್ನು ಪಾಸ್ ಮಾಡಿದ್ದಾರೆ. ಕಾರ್ಪೊರೇಷನ್‌ನಲ್ಲಿ ರೆಕಗ್‌ನೈಸ್ ಮಾಡುವುದಕ್ಕೆ ಪ್ರಾವಿಷನ್ ಇಲ್ಲವೆಂದರೆ ಡೀ-ರೆಕಗ್‌ನೈಸ್ ಮಾಡುವ ನಿರ್ಣಯವನ್ನು ಪಾಸ್ ಮಾಡುವುದಕ್ಕೆ ಅಧಿಕಾರ ಇದೆಯೇ ?

ಅಧ್ಯಕ್ಷರು.—ತಾವು ವಕೀಲರಾಗಿದ್ದೀರಿ, ಮಂತ್ರಿಗಳಾಗಿದ್ದೀರಿ. ರೆಸಲ್ಯೂಷನ್ ಪಾಸ್ ಮಾಡಿದರೆ ಅದನ್ನು ಚಾಲೆಂಜ್ ಮಾಡುವ ಅಧಿಕಾರ, ಕೋರ್ಟಿಗೆ ಹೋಗುವ ಅಧಿಕಾರ ಅಗ್ರೀವ್ಡ್ ಪಾರ್ಟಿಗೆ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವುದೇ ನಿರ್ಣಯಗಳನ್ನು ವಿಥೆಲ್ಡ್ ಮಾಡತಕ್ಕ ಅಧಿಕಾರ ಸರ್ಕಾರಕ್ಕಿದೆ. ಅದಕ್ಕಾಗಿ ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ. ಅದು ಸುಪ್ರೀಂ ಬಾಡಿ ಏನಂ ? They have to act within the framework of the law which is given by this House. This Houe is supreme and this House has got every right to discuss.

(Interruption)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಏನು ನಿರ್ಣಯ ತೆಗೆದುಕೊಂಡು ರೆಸಲ್ಯೂಷನ್ ಪಾಸ್ ಮಾಡಿದ್ದಾರೆ ಅದು ಸಮಂಜಸವಾದುದಲ್ಲ. ಆ ನಿರ್ಣಯಕ್ಕೆ ಮಾನ್ಯತೆ ಕೊಡಬಾರದು. ಅವರಿಗೆ ತಾವು ಡೈರೆಕ್ಷನ್ ಕೊಡಬೇಕು. ಅಪೋಸಿಷನ್ ಲೀಡರ್ ಎಂದು ರೆಕಗ್‌ನೈಸ್ ಮಾಡಬೇಕೆಂದು ಏನು ಕನ್‌ವೆನಷನ್ ಪ್ರಕಾರ ನಡೆದಿದೆ ಆ ಪ್ರಕಾರ ಆಗಬೇಕು, ಯಾವ ಅಧಿಕಾರಿಗಳು ಹೊಡೆದು ಬಡಿದು ಅವಾಚ್ಯ ಶಬ್ದಗಳಿಂದ ಬೈಯ್ದಿದ್ದಾರೆ. ಅಪಮಾನ ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ, ಎಲೆಕ್ಟೆಡ್ ರೆಪ್ರಸೆಂಟೇಟೀವ್ ಯಾರೇ ಇರಬಹುದು, ನಮ್ಮ ಪಕ್ಷದವರು ಇರಬಹುದು ನಿಮ್ಮ ಪಕ್ಷದವರು ಇರಬಹುದು, ಇನ್ನೊಂದು ಮುನಿಸಿಪಾಲಿಟಿಯಲ್ಲಿ ಅಥವಾ ಮತ್ತೊಂದು ಕಡೆ ಇರಬಹುದು. ಆದರೆ ಈ ರೀತಿ ನಡೆದುಕೊಂಡು ಹೋದರೆ ತೊಂದರೆಯಾಗುತ್ತದೆ ಮುಂದೆ ಯಾವ ನಾನ್ ಆಫಿಷಿಯಲ್‌ಗೂ ಗೌರವ ಇರುವುದಿಲ್ಲ. ಆದ್ದರಿಂದ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮುಂದೆ ಈಗಾಗಲೇ ಏನು ರೆಸಲ್ಯೂಷನ್ ಪಾಸ್ ಮಾಡಿದ್ದಾರೆ, ಅದನ್ನು ವಿಥೆಲ್ಡ್ ಮಾಡಿ ಅವರಿಗೆ ಡೈರೆಕ್ಷನ್ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಹೇಳಿಕೆಯಲ್ಲಿ ವಿವರವಾಗಿ ಹೇಳಿದ್ದೇನೆ. ವಿರೋಧ ಪಕ್ಷದ ನಾಯಕರು ಎ. ಐ. ಡಿ. ಎಂ. ಕೆ. ಪಕ್ಷದವರಿಂ ಇರಲಿಲ್ಲವೆಂದು. ಹೇಳುತ್ತಾರೆ. ನಾನು ನಿರ್ಣಯವನ್ನು ಓದಿದ್ದೇನೆ. ಆ ದಿನ ಇವರಿಂ ಯಾರೂ ಲೀಡರ್ ಆಲ್ಲವೆಂದರಿಂ. ಡಿ. ಎಂ. ಕೆ. ಎ. ಐ. ಡಿ. ಎಂ. ಕೆ. , ಬಿ, ಜೆ. ಪಿ. ಯವರೆಲ್ಲ ಇದ್ದರಿಂ. ಆ ದಿನ ನಿರ್ಣಯ ಆಗಿದೆ ಆ ರೆಸಲ್ಯೂಷನ್ ಕೂಡ ನನ್ನ ಹತ್ತಿರ ಇದೆ. The resolution was passed by th

Opposition parties present in the House and only Congress members were absent. ಆದಕ್ಕೆ ನಾವೇನು ಮಾಡೋಣ, ಅವರು ವಾಕ್ ಔಟ್ ಮಾಡಿದ್ದಾರು. ಚುನಾಯಿತ ಪ್ರತಿನಿಧಿಗಳ ಬಗ್ಗೆ ಗೌರವ ಇರಬೇಕೆಂಬುದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರ ಸ್ವಾಯತ್ತತೆಯಿಂದ ಕೂಡಿರತಕ್ಕ ಬೆಂಗಳೂರು ಮಹಾ ನಗರಪಾಲಿಕೆ ಸದಸ್ಯರು ಬಹುಮತ ದಿಂದ ಯಾರೋ ಒಬ್ಬರು ನಾಯಕರು ಅಲ್ಲ, ಬೇರೆ ಒಬ್ಬರು ನಾಯಕರು ಆಗಬೇಕೆಂದು ಸರ್ವಾನುಮತದಿಂದ ನಿರ್ಣಯ ಮಾಡಿದರೆ ಸರ್ಕಾರ ಅದರ ಮೇಲೆ ಏನು ನಿರ್ಣಯ ಮಾಡುವುದಕ್ಕಾಗುತ್ತದೆ ? ದಯವಿಟ್ಟು ತಾವು ಯೋಚಿಸಿ.

SRI M. MALLIKARJUNA KHARGE.—It is a single largest party.

ಅಧ್ಯಕ್ಷರು.—ನಿಮಗೆ ಉತ್ತರ ಬೇಕೋ ಬೇಡವೋ ? ಉತ್ತರ ಹೇಳುವವರೆಗೆ ಸ್ವಲ್ಪ ಶಾಂತ ರೀತಿಯಿಂದ ಕೂರಬೇಕು. ಇಲ್ಲದಿದ್ದರೆ ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಅವಕ್ಕುನಿರ್ಣಯ ಆದ ಪ್ರಕಾರಮಾನ್ಯತೆ ಕೊಟ್ಟು ಸಂದರ್ಭದಲ್ಲಿಕಾಂಗ್ರೆಸ್ ಜೊತೆಇತರವಿರೋಧ ಪಕ್ಷದವರು ಸೇರಿ ಅವರನ್ನೇ ನಾಯಕರನ್ನಾಗಿ ಮಾಡಬೇಕೆಂದು ಅವರ ಮುಂದೆ ಬೇಡಿಕೆಇಟ್ಟಿದ್ದರಂತೆ ಅವರು ನಮ್ಮ ಪಕ್ಷದ ನಾಯಕರಲ್ಲ, ಕಾಂಗ್ರೆಸ್ ಪಕ್ಷದ ನಾಯಕರು ಎಂದು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದ ನಾಯಕರು ನನಗೆ ಕೊಡಿ ಎಂದು ಕೇಳಬಹುದು. ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಇಂಥವರನ್ನೇ ನಾಯಕರನ್ನಾಗಿ ಮಾಡಬೇಕು, ಇಂಥವರನ್ನು ಮಾಡಬಾರದು ಎಂದು ಹೇಳುವುದಕ್ಕೆ ಕೆ ಎಂ. ಸಿ. ಆಕ್ಟ್ ಪ್ರಕಾರ ಸರ್ಕಾರಕ್ಕೆ ಅಧಿಕಾರ ಇಲ್ಲ. ಪಾರ್ಲಿಮೆಂಟಿನಲ್ಲಿ ಯಾರು ನಾಯಕರಾಗಿರಬೇಕು, ಈ ಮಹಾ ಸಭೆಯಲ್ಲಿ ಯಾರು ನಾಯಕರಾಗಿರಬೇಕು ಎಂಬ ಬಗ್ಗೆ ನಿಯಮಾವಳಿ ಇದೆ. ಅದರ ಪ್ರಕಾರ ನಾಯಕರನ್ನು ಆರಿಸತಕ್ಕದ್ದು, ಮನ್ನಣೆ ಪಡೆಯತಕ್ಕದ್ದು. ಅದಕ್ಕೆಲ್ಲಾ ಕಾನೂನುಗಳಿವೆ. ಕಾನೂನಿಲ್ಲದಿದ್ದರೂ ಅಭ್ಯಾಸ ಬಲದಿಂದ ಅಲ್ಲಿ ಬಂದಿರತಕ್ಕ ಕನ್‌ವೆನ್‌ಷನ್ ಪ್ರಕಾರ ಒಬ್ಬರನ್ನು ಮಾಡಿದ್ದಾರೆ. ಅವರು ಬೇಡ ಅವರನ್ನು ತೆಗೆಯಬೇಕು ಎಂದು ಸರ್ವಾನುಮತದಿಂದ ನಿರ್ಣಯ ಮಾಡಿರುವಾಗ ಡೈರೆಕ್ಷನ್ ಕೊಡಿ ಎಂದು ಹೇಳುತ್ತಾರೆ. ಹೇಗೆ ಕೊಡುವುದು ? ದಯವಿಟ್ಟು ತಾವು ಯೋಚನೆ ಮಾಡಬೇಕಾಗುತ್ತದೆ ಯಾವ ಯಾವ ವಿಷಯಗಳಿಗೆ ಡೈರೆಕ್ಷನ್ ಕೊಡಬೇಕು ಎಂಬ ಬಗ್ಗೆ ಕಾನೂನಿನಲ್ಲಿ ಅವಕಾಶ ಇದೆ. ನಾನೂ ಓದಿಕೊಂಡು ಬಂದಿದ್ದೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆ ಪ್ರಶ್ನೆ ಕೇಳಬಹುದು ಎಂದು ಪೂರ್ವ ಭಾವಿಯಾಗಿ ನೋಡಿಕೊಂಡು ಬಂದಿದ್ದೇನೆ ಯಾರು ನಾಯಕರಾಗಿರಬೇಕು ಯಾರು ಆಗಿರ ಬಾರದು ಎಂಬ ಬಗ್ಗೆ ತೀರ್ಮಾನ ಮಾಡಬೇಕಾದ್ದು ನಾನಲ್ಲ, ಕಾಂಗ್ರೆಸ್ ಪಕ್ಷಕ್ಕೆ ಸಾಕಷ್ಟು ಬಹುಮತ ಇದೆ, ನಮ್ಮನ್ನು ಮಾಡಿ ಕೇಳಿದರೆ ನಾನು ಬೇಡ ಎಂದು ಹೇಳುವುದಿಲ್ಲ. ಸರ್ವಾನುಮತ ದಿಂದ ನಿರ್ಣಯವನ್ನು ಮಾಡಿ ಇವತ್ತೇ ತೆಗೆಯಿರಿ ಎಂದು ಅಧಿಕಾರಿಗಳಿಗೆ ಸರ್ವಾನುಮತದ ಆದೇಶ ಕೊಟ್ಟರೆ ಅಧಿಕಾರಿಗಳು ಏನು ಮಾಡಬೇಕು ? ಆ ಆದೇಶದ ಪ್ರಕಾರ ಮುಂದಿನ ಕ್ರಮವನ್ನು ಅಧಿಕಾರಿಗಳು ತೆಗೆದುಕೊಳ್ಳದೇ ಹೋದರೆ ಅವರು ಕರ್ತವ್ಯಚ್ಯುತಿ ಮಾಡಿದಂತಾಗುತ್ತದೆ. ಆಗ ಅವರ ಮೇಲೆ ಶಿಸ್ತಿನ ಕ್ರಮವನ್ನು ಕಾರ್ಪೊರೇಷನ್ನಿನವರು ತೆಗೆದುಕೊಳ್ಳಬೇಕಾಗುತ್ತದೆ. ಅವರೂ ಕೂಡ ಎರಡು ಮೂರು ದಿನ ತಡೆದಿದ್ದಾರೆ. ಅವರು ನೋಟೀಸ್ ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ನಂತರ ಅವರು ಈ ನಿರ್ಣಯದ ಪ್ರಕಾರ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ದಯವಿಟ್ಟು ತೆರವು ಮಾಡಬೇಕೆಂದು ನೋಟೀಸ್ ಹಚ್ಚಿದ್ದಾರೆ. ಆದು ಹಚ್ಚಿ ಬೇಗ ಹೋಗಿದ ಮೇಲೆ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿದ್ದಾರೆ. ಚುನಾಯಿತ ಪ್ರತಿನಿಧಿಗಳಾದವರು ಅವಕಾಶ ಕೊಡದಿದ್ದಾಗ ಏನು ಮಾಡಬೇಕು ? ಮುಂದಿನ ಕ್ರಮ ಏನು ತೆಗೆದುಕೊಳ್ಳಬೇಕು ? ಜಗಳ ಆಡಿದ್ದಾರೆ. ನನಗೆ ಅಫಿಷಿಯಲ್ಲಾಗಿ ಬಂದಿರುವ ವರದಿ ಪ್ರಕಾರ ಅವರು ಜಗಳ ಆಡಿದ್ದಾರೆ. ಬೈದಿದ್ದಾರೆ. ಉಭಯತ್ರರೂ ಪೋಲೀಸರಿಗೆ ದೂರು ಕೊಟ್ಟಿದ್ದಾರೆ. ಅದು ತೀರ್ಮಾನ ಆಗಲಿ. ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಡತಕ್ಕ ಜವಾಬ್ದಾರಿ ಎಲ್ಲರಿಗೂ ಇದೆ. ಅವರಿಗೂ ಗೌರವ ಪಡೆಯತಕ್ಕ ಹಕ್ಕಿದೆ. ಆದರೆ ಅವರೂ ಜವಾಬ್ದಾರಿಯಿಂದ ಕರ್ತವ್ಯ ದೃಷ್ಟಿಯಿಂದ ನಡೆದುಕೊಳ್ಳತಕ್ಕ ಕೆಲಸ ಮಾಡಬೇಕು. ಸರ್ವಾನುಮತದಿಂದ ತೆಗೆದಿದ್ದಾರೆ ಎಂದು ಹೇಳಿದರೂ ಇಲ್ಲ ಇಲ್ಲ ಆಲ್ಲೇ ಕೂತ್ಕೊಳ್ಳುತ್ತೇನೆ ಎಂದು ಹೇಳಿದರೆ ಅದು ತಪ್ಪು ರಾಮಕೃಷ್ಣ ಹೆಗಡೆಯವರು ನನ್ನನ್ನು ಮಂತ್ರಿಯಿಂದ ತೆಗೆದರೂ ಇಲ್ಲ. ಇಲ್ಲ, ಇಲ್ಲೇ ಕೂತ್ಕೊಳ್ತೀನೆ, ಏನಾದರೂ ಮಾಡಿ ಎಂದು ಹೇಳಿದರೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಯಾವ ಅನಾಲಜಿ ಇದಂ ?

ಅಧ್ಯಕ್ಷರಂ.—ಅವರು ಹೇಳಿ ಮುಂಗಿಸಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ವಾನುಮತದ ನಿರ್ಣಯದ ಆಧಾರದ ಮೇಲೆ ಕ್ರಮ ತೆಗೆದು ಕೊಂಡಿದ್ದಾರೆ. ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ಅಧಿಕಾರಿಗಳು ಕರ್ತವ್ಯ ಭ್ರಷ್ಟರಾಗುತ್ತಾರೆ. ಯಾವರೀತಿ ಅವರು ನಡೆದುಕೊಳ್ಳಬೇಕು ? ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಹೇಳಿದ್ದಾರೆ. ಈಗ ಇಬ್ಬರೂ ಪೋಲೀಸರಿಗೆ ಕಂಪ್ಲೇಂಟ್ ಕೊಟ್ಟಿದ್ದಾರೆ. ಅಲ್ಲಿ ತೀರ್ಮಾನ ಆಗಲಿ. ನಾನು ತಪ್ಪಿದೆ ಎಂದು ಯಾರ ಮೇಲೂ ಹೇಳುತ್ತಿಲ್ಲ. ಆದರೆ ಮೇಲುನೋಟಕ್ಕೆ ಕಾಣಿಸತಕ್ಕದ್ದು ನಿರ್ಣಯ ಜಾರಿಗೊಳಿಸುವುದಕ್ಕೆ ಹೋದಾಗ ಅವರು ತಡೆದದ್ದು ತಪ್ಪು. ಇದು ಕೋರ್ಟಿನಲ್ಲಿ ತೀರ್ಮಾನ ಆಗಲಿ. ಇದರಲ್ಲಿ ಸರ್ಕಾರ ಮಾಡುವುದು ಏನೂ ಇಲ್ಲ. ಆದು ಸ್ವಾಯತ್ತ ಸಂಸ್ಥೆ. ಯಾರು ನಾಯಕರು, ಯಾರು ನಾಯಕರಲ್ಲ ಎಂಬ ಬಗ್ಗೆ ಅವರು ತೀರ್ಮಾನ ಮಾಡಬೇಕು. ಈ ಸಭೆಯಾಗಲಿ, ಸರ್ಕಾರವಾಗಲಿ ಅವರಿಗೆ ನಿರ್ಣಯಾತ್ಮಕವಾದ ತಿಳುವಳಿಕೆ, ಸೂಚನೆ ಕೊಡುವುದಕ್ಕೆ ಕಾನೂನಿನಲ್ಲಿ ದಾರಿ ಇಲ್ಲ ಎಂದು ವಿನಯದಿಂದ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಾವು ಏನು ಉತ್ತರ ಹೇಳುವುದು ? ರಾಮಕೃಷ್ಣ ಹೆಗಡೆ ಯವರು ತಮ್ಮನ್ನು ಮಂತ್ರಿ ಪದವಿಯಿಂದ ತೆಗೆದರೂ ನಾನು ಕೂತಿರ್ತಾ ಎಂದು ಹೇಳಿದರು. ಆಗ ಆ ಜಾಗದಲ್ಲಿ ಕೂತ್ಕೊಳ್ಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದಕ್ಕೋಸ್ಕರವೇ ನಾವು ತಮ್ಮಲ್ಲಿ ಎರಡೂವರೆ ಗಂಟೆ ಕಾಲದ ಡಿಸ್ಕಷನ್‌ಗೆ ಅನುಮತಿ ಕೇಳಿದ್ದೆವು. ಈಗ ನಾವು ಕೇಳಿಬಿಟ್ಟೆವು, ಅವರು ಹೇಳಿಬಿಟ್ಟರು ಅನ್ನೋದಲ್ಲ. ಅವರಿಷ್ಟ ಬಂದಹಾಗೆ ಅವರು ಹೇಳಿದರೆ, ರೆಸಲ್ಯೂಷನ್ ಮಾಡಿದಾಗ ಯಾರೂ ಇರಲಿಲ್ಲ ಎಂದು ಅವರಿಗೆ ಹೇಗೆ ವರದಿ ಬಂದಿದೆಯೋ ಅದೇರೀತಿ ನಮಗೂ ಬಂದಿದೆ. ಅವರು ಬಾಯಿಗೆ ಬಂದ ಹಾಗೆ ಉತ್ತರ ಹೇಳಿದರೆ ನಾವು ಕೇಳಿಕೊಂಡು ಹೋಗಬೇಕಾ ?

ಅಧ್ಯಕ್ಷರು.—ಬಾಯಿಗೆ ಬಂದಹಾಗೆ ಅಲ್ಲ, ರೆಕಾರ್ಡ್ ನೋಡಿ ಹೇಳಬೇಕಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಲೀಡರ್ ಆಗಬೇಕೆಂದು ಅಲ್ಲಿ ಕೇಳಲಿ ಎಂದು ಈ ರೀತಿ ಹೇಳುತ್ತಾರೆ. ಆಕ್ಟ್‌ನಲ್ಲಿ ಲೀಡರ್ ಆಗಬೇಕು ಎಂದು ಇಲ್ಲ ಆದು ಕನ್‌ವೆನ್‌ಷನ್ ಪ್ರಕಾರ ಆಗುತ್ತದೆ. ಏನು ಅರ್ಜಿ ಬರೆದುಕೊಂಡು ಹೋಗಿ ಕೇಳಬೇಕಾ ? ಅಲ್ಲಿ ಏನೂ ಇಲ್ಲ.

ಶ್ರೀ ಪಿ. ಎಂ.

ಅಧ್ಯಕ್ಷರು.—ನಾವು ಏನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ನೀವು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೀರಿ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕನ್ವೆನ್ಸ್ ಇದೆ. ಆ ಪ್ರಕಾರ ಕಾರ್ಪೊರೇಷನ್‌ನಲ್ಲಿ ಮಾಡಿಲ್ಲ.

ಅಧ್ಯಕ್ಷರು.—ನೀವು ಮಂತ್ರಿಗಳ ಗಮನವನ್ನು ಸೆಳೆದಿದ್ದೀರಿ. ಅದಕ್ಕೆ ಅವರು ಉತ್ತರವನ್ನು ಹೇಳಿದ್ದಾರೆ. ಅವರು ಉತ್ತರವನ್ನು ಹೇಳಿದ ಮೇಲೂ ನಾನು ಏನು ಮಾಡುವುದಕ್ಕೆ ಬರುವುದಿಲ್ಲ. ನಾಳೆ ಆ ಇಲಾಖೆಯ ಡಿಮ್ಯಾಂಡ್ ಬಂದಾಗ ಗಂಟೆಗಟ್ಟಲೆ ಆದರ ಬಗ್ಗೆ ಮಾತನಾಡಿ ಮಂತ್ರಿಗಳನ್ನು ಕನ್ವಿನ್ಸ್ ಮಾಡುವಿರಂತೆ. ಇಲ್ಲಿಗೆ ಇದು ಸಾಕು. ಇದರ ಬಗ್ಗೆ ಚರ್ಚೆ ಇಲ್ಲಿಗೆ ಮುಕ್ತಾಯವಾಯಿತ್ತ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲ, ಇಲ್ಲ.....

ಅಧ್ಯಕ್ಷರು.—ನಮ್ಮಲ್ಲಿರುವಂತಹ ನಿಯಮಾವಳಿಯ ಪ್ರಕಾರ ವಿರೋಧ ಪಕ್ಷದ ನಾಯಕರು ಯಾರೆಂಬುದನ್ನು ರೆಕಗ್ನೈಸ್ ಮಾಡುವುದಕ್ಕೆ ಅಧಿಕಾರ ಇದೆ. ಆ ರೂಲ್ಸ್ ಪ್ರಕಾರ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕನ್ವೆನ್ಸನ್ ಇದೆಯಲ್ಲಾ,

ಅಧ್ಯಕ್ಷರು.—ನಿಮ್ಮನ್ನು ಉಪ ನಾಯಕರೆಂದು ನಿಮ್ಮ ಪಕ್ಷದವರು ತೀರ್ಮಾನ ಮಾಡಿದ್ದಾರೆ. ಕನ್ವೆನ್ಷನ್ ಪ್ರಕಾರವೂ ನಿಮ್ಮನ್ನು ಉಪನಾಯಕರೆಂದು ರೆಕಗ್ನೈಸ್ ಮಾಡಿಲ್ಲ. ಆದರೂ ನಿಮ್ಮನ್ನು ಸಂಭೋದಿಸುವಾಗ ಉಪನಾಯಕರೆಂದೇ ಒಮ್ಮೊಮ್ಮೆ ಕರೆಯುತ್ತೇವೆ. ಕನ್ವೆನ್ಷನ್ ಲಾ ಆಗುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೆಕಗ್ನೈಸ್ ಮಾಡುತ್ತೀರೋ, ಡೀ-ರೆಕಗ್ನೈಸ್ ಮಾಡುತ್ತೀರೋ ಮಾಡಿ, ಆ ಪ್ರಶ್ನೆ ಇಲ್ಲ.

ಅಧ್ಯಕ್ಷರು.—ನೀವು ವಕೀಲರಾಗಿದ್ದವರು. ನಾನು ವಕೀಲನಾಗಿದ್ದವನು. ಮಂತ್ರಿಗಳೂ ಕೂಡ ವಕೀಲರಾಗಿದ್ದವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಂತ್ರಿಗಳು ಕಾನೂನು ಶಾಲೆಯ ಗುರುಗಳು. ಆ ಮಾತು ಬೇರೆ.

ಅಧ್ಯಕ್ಷರು.—ನೀವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರು ಯಾವ ರೀತಿ ಪ್ರಭಾವ ಬೀರುತ್ತಿದ್ದಾರೆಂದರೆ.....

ಅಧ್ಯಕ್ಷರು.—ನೀವು ದಯಮಾಡಿ ಕೂಡಿ. ಪೇಳಿ ನೋಡಿ ಎಷ್ಟಾಗಿದೆಯಂತ ? ನಿಯಮಾವಳಿಯ ಸಾರವಾಗಿ ಇಷ್ಟರಲ್ಲಿ ಎಲ್ಲವುಗಳನ್ನು ಮುಗಿಸಬೇಕಾಗಿತ್ತು. ಆದರೂ ನಿಮಗೆ ಸಹಾಯಕವಾಗಲಿ ಅಂತ ಳಿ ಗಮನ ಸೆಳೆಯುವ ಸೂಚನೆಗಳನ್ನು ಅಜೆಂಡಾದಲ್ಲಿ ಹಾಕಲಾಗಿದೆ. ಅವರು ಅದಕ್ಕೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಇನ್ನೇನಾದರು ಇದ್ದರೆ ಇಲಾಖೆಯ ಡಿಮ್ಯಾಂಡ್ ಬಂದಾಗ ಮಾತನಾಡುವಿರಂತೆ. ತಾವು ಕೂಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾರ್ಪೊರೇಷನ್‌ನಲ್ಲಿರುವ ವಿರೋಧಪಕ್ಷದ ನಾಯಕರನ್ನು ಹೊಡೆದೂ-ಬಡಿದು ಮಾಡಿದ್ದರ ಬಗ್ಗೆ ಇಲ್ಲಿ ಕೇಳತಕ್ಕಂತಹದ್ದು ಇಲ್ಲ ಅಂದರೆ ಹೇಗೆ ? ಕೆಲವು ಜನ ಹೋಗಿ ಅವರನ್ನು ಅಲ್ಲಿಂದ ದಬ್ಬಿ ಹೊರ ಹಾಕಿ, ಅವರ ಕೊರಳಿಗೆ ಕೀಲಿ ಹಾಕಿದ್ದಾರೆ. ಅವರು ಮಾಡಿರುವಂತಹ ರೆಸಲ್ಯೂಷನ್ ಅನ್ನು ವಿತ್‌ಡ್ರಾ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆಯಲ್ಲಾ. ಅದರಂತೆ ಮಾಡಬಹುದು.

(ಗೊಂದಲ)

ಅಧ್ಯಕ್ಷರು.—ನೀವು ಉಪನಾಯಕರು. ಮಾಜಿ ಮಂತ್ರಿಗಳು ಹಾಗೂ ಹಿರಿಯ ಸದಸ್ಯರಿದ್ದೀರಿ. ಸಭೆಯನ್ನು ವ್ಯವಸ್ಥಿತವಾಗಿ ನಡೆಸುವುದಕ್ಕೆ ಈ ರೀತಿ ಆಡ್ಡ ಬರಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ಇವರು ರಾಜಕೀಯ ಮಾಡುತ್ತಿದ್ದಾರೆ. ಪಕ್ಷಗಳನ್ನು ಸಪರೇಟ್ ಮಾಡಿ ತೊಂದರೆ ಕೊಡಬೇಕು ಎನ್ನುತಕ್ಕಂತಹ ದೃಷ್ಟಿಯಿಂದ ಆ ನಿರ್ಣಯ ತೆಗೆದು ಕೊಂಡಿದ್ದಾರೆ. ಅಲ್ಲಿ ಒಂದು ಕನ್ವೆನ್ಷನ್ ಇದ್ದರೂ ಕೂಡ.....

ಅಧ್ಯಕ್ಷರು.—ಅನವಶ್ಯಕವಾಗಿ ಏಕೆ, ಮಾತನಾಡುತ್ತಿದ್ದೀರಿ ? ಶ್ರೀ ಕೆ. ಎಚ್. ಪಾಟೀಲ್‌ರವರೆ ನೀವು ಆವರಿಗೆ ಹೇಳಿ. ಹೀಗೆ ನೀವು ಮತ್ತೊಬ್ಬರಿಗೆ ಹೇಳುವುದನ್ನು ಬಿಟ್ಟು ಮತ್ತೊಬ್ಬರಿಂದ ಹೇಳಿಸಿಕೊಳ್ಳುವುದು ಬೇಡ. ಅದರ ಬಗ್ಗೆ ಏನು ಇದ್ದರೂ ನೋಟೀಸ್ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ನೋಟೀಸ್ ಈಗಾಗಲೇ ತಮ್ಮ ಬಳಿ ಇದೆ.

ಅಧ್ಯಕ್ಷರು.—ನೋಟೀಸ್ ಕೊಡಿ. ಅದನ್ನು ಎಗ್ಸಾಮಿನ್ ಮಾಡುತ್ತೇನೆ. ಈಗ ತಾವು ಕೂಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೋಟೀಸ್ ಕೊಟ್ಟಿದ್ದೇನೆ. ಎರಡು ದಿವಸ ಹಿಂದೆಯೇ ಕೊಟ್ಟಿದ್ದೇನೆ.

ಶ್ರೀ ಎಂ. ರಘುಪತಿ.—ಇದು ಅತಿಯಾಯಿತು.

ಅಧ್ಯಕ್ಷರು.—ದಯಮಾಡಿ ನೀವು ಕುಳಿತುಕೊಳ್ಳಿ. ಇನ್ನೊಂದು ವಿಚಾರದ ಬಗ್ಗೆ ಚರ್ಚೆಯಾಗುವುದಕ್ಕೆ ಅವಕಾಶ ಮಾಡಿಕೊಡಿ. ನೋಟೀಸ್ ಕೊಡಿ, ಅದನ್ನು ವಿಚಾರ ಮಾಡುತ್ತೇನೆ. ದಯಮಾಡಿ

ಕೂಡಿ. ಇದು ಒಳ್ಳೆಯದಲ್ಲ. ನೀವು ಸೀನಿಯರ್ ಮೆಂಬರ್, ಎಕ್ಸ್‌ಪೀರಿಯನ್ಸ್‌ರ್ ಹಾಗೂ ಉಪ ನಾಯಕರು. ಇಷ್ಟೆಲ್ಲಾ ಇರಬೇಕಾದರೆ ಈ ರೀತಿ ಮಾಡಿದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾನೂನು ಪ್ರಕಾರ ಅವರು ತೆಗೆದುಕೊಂಡಿರುವಂತಹ ರೆಸಲ್ಯೂಷನ್ ಅನ್ನು ವಿತೋಲ್ಡ್ ಮಾಡಬಹುದು.

ಅಧ್ಯಕ್ಷರು.—ನೀವು ಈ ರೀತಿ ಮಾಡುವುದಾದರೆ, ರೆಕಾರ್ಡ್ ಮಾಡುವುದು ಬೇಡ ಅಂತ ಹೇಳ ಬೇಕಾಗುತ್ತದೆ. ಆ ಪಟ್ಟಕ್ಕೆ ಹೋಗುವುದೂ ಬೇಡ.

ಅಧ್ಯಕ್ಷರು.— ದಯವಿಟ್ಟು ಎಲ್ಲರೂ ಕೂಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಹೇಳಿ. ನಾರಾಯಣ ಸ್ವಾಮಿಯವರ ಬಗ್ಗೆಯೂ ಹೇಳಲಿ.

ಅಧ್ಯಕ್ಷರು.—ಹೀಗೆ ಮಾತನಾಡುವುದಾದರೆ ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ರೆಕಾರ್ಡ್ ಮಾಡದೇ ಇದ್ದರೂ ನಾನು ಮಾತನಾಡುವುದನ್ನು ಮಾತನಾಡೇ ಆಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಏನು ಅಧ್ಯಕ್ಷರೇ, ರೆಕಾರ್ಡ್ ಮಾಡುವುದಿಲ್ಲವೆಂದರೆ ಹೇಗೆ ?

ಅಧ್ಯಕ್ಷರು.—ನೀವು ರೂಲ್ಸ್ ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ,—ನ್ಯಾಯವಾಗಿ ಇರುವುದನ್ನು ನಾವು ಕೇಳಿದರೂ ಕೂಡಾ...

ಅಧ್ಯಕ್ಷರು.—ಆ ಪ್ಯಾಟರ್ ಕ್ಲೋಸ್ ಆಯಿತು ಎಂದು ಆಗಲೇ ಹೇಳಿದ್ದೇನೆ. ಗೊಂದಲ) ಚರ್ಚೆಗೆ ನಿಮಗೆ ಅವಕಾಶ ಇದೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ ತಾವು ಸಹಾನುಭೂತಿಯಿಂದ ಈ ವಿಷಯದ ಬಗ್ಗೆ ಗಮನ ಸೆಳೆಯುವ ಸೂಚನೆ ಮಂಡಿಸಿದ ನಂತರ ಇಲ್ಲಿ ವಿವರ ವಿನಿಮಯ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅವರು ಸರ್ಕಾರದ ಗಮನವನ್ನು ಸೆಳೆದಮೇಲೆ, ಅದಕ್ಕೆ ಸರ್ಕಾರದ ಪರವಾಗಿ ನಾನು ಲಿಖಿತ ಮೂಲಕ ಉತ್ತರವನ್ನು ಕೊಟ್ಟಿದ್ದೇನೆ ಆನಂತರ ಉದ್ಭವಿಸಿದ ಉಪ ಪ್ರಶ್ನೆಗಳಿಗೂ ಸಹಾ ನಾನೂ ಉತ್ತರವನ್ನು ಕೊಟ್ಟಿದ್ದೇನೆ. ನನ್ನ ಉತ್ತರ, ನನ್ನ ದೃಷ್ಟಿಯಲ್ಲಿ ಕಾನೂನು ದೃಷ್ಟಿಯಲ್ಲಿ ಹಾಗೂ ಸಂಪ್ರದಾಯದ ದೃಷ್ಟಿಯಲ್ಲಿ ಸಂಪೂರ್ಣ ವಾಗಿದೆ. ಅದರ ಮೇಲೆ ಇನ್ನು ಮುಂದೆ ವಿಚಾರ ಮಾಡುವುದಕ್ಕೆ ವಿಚಾರವೇ ಇಲ್ಲ. ಮುಂದಿನ ವಿಷಯದ ಬಗ್ಗೆ ತಾವು ಸದಸ್ಯರನ್ನು ಕರೆದಿದ್ದೀರಿ ಆದರೂ ಸನ್ಮಾನ್ಯ ಖರ್ಗೆಯವರು ತಮ್ಮ ಪೂಲಿಂಗ್‌ನ್ನು ಛಾಲೆಂಜ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಸರಿಯಲ್ಲ. ಈ ರೀತಿ ಕಿತಾಪತಿ ಮಾಡಿ ಕೊನೆಗೆ ತಮಗೆ ರೇಗಿಸಿ ನಮ್ಮ ಹಕ್ಕನ್ನು ಪೊಟಕುಗೊಳಿಸಬೇಕೆಂದು ಮಾನ್ಯ ಮಂತ್ರಿಗಳು . ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮುಂದಿನ ಕಾರ್ಯಕ್ರಮವೂ ಇಲ್ಲಿ ನಡೆಯಬೇಕಾಗಿದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನ ನೋಟೀಸ್ ಮೇಲೆ.....(ಗೊಂದಲ)

ಅಧ್ಯಕ್ಷರು.—I will exami ne your notice ಎಂದು ಹೇಳಿದ್ದೇನೆ ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸೋಮವಾರ ಅವಕಾಶ ಮಾಡಿಕೊಡುತ್ತೀರಾ ?

ಅಧ್ಯಕ್ಷರು.—ಎರಡು ಕಡೆಯವರು ಬನ್ನಿ ಜೊತೆಯಲ್ಲಿ ಕುಳಿತುಕೊಂಡು ಮಾತನಾಡೋಣ ನಿಮ್ಮ ಕಳಕಳಿ ನನಗೆ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸೋಮವಾರ ಅವಕಾಶ ಮಾಡಿಕೊಡುತ್ತೇವೆಂದರೆ.....

(ಗೊಂದಲ)

ಶ್ರೀ ಎಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ...

(ಗೊಂದಲ)

ಅಧ್ಯಕ್ಷರು.—ತಾವೆಲ್ಲರೂ ಕುಳಿತುಕೊಳ್ಳಿ ಮುಂದಿನ ವಿಷಯಕ್ಕೆ ಹೋಗೋಣ. ಶ್ರೀನಿವಾಸ್ ಅವರು ಮುಂದಿನ ಗಮನ ಸೆಳೆಯುವ ಸೂಚನೆ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯಲಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೇ, ಬೆಂಗಳೂರಿನ ನಂದಿನಿ ಲೇಔಟ್‌ನಲ್ಲಿರುವ...

ಶ್ರೀ ಎಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಯಾವ ವಿಷಯದ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಳೇ ವಿಷಯವನ್ನು ಅವರೂ ಶುರು ಮಾಡಿದರೆ ಆ ಬಗ್ಗೆ ನಾವೂ ಶುರು ಮಾಡುತ್ತೇವೆ, ಅವರು ಯಾವ ವಿಷಯದ ಬಗ್ಗೆ ಕ್ರಿಯಾಲೋಪ ಎತ್ತಿದ್ದಾರೆ.

(ಗೊಂದಲ)

ಶ್ರೀ ಯು. ಭೂಪತಿ.—ಈಗ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ,

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಏಕರ ಸಲುವಾಗಿ ಎಂದು ಹೇಳಲಿ ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಯು. ಭೂಪತಿ.—ನಾನು ತಕರಾರು ಮಾಡುತ್ತಿಲ್ಲ ತಾವು ರೂಲಿಂಗ್ ಕೊಟ್ಟಿದ್ದೀರಿ. ನಂತರ ಶ್ರೀ ಕೆ. ಎಚ್. ಶ್ರೀನಿವಾಸ್ ಅವರನ್ನು ಕರೆದಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚರ್ಚೆ ನಡೆಯುತ್ತಿದ್ದಾಗ ಆಬ್ಜೆಕ್ಷನ್ ಇದ್ದರೆ ಪಾಯಿಂಟ್ ಆಫ್ ಆರ್ಡರ್ ತರಬಹುದು.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಏನು ಎಂದು ನನಗೂ ಗೊತ್ತಿಲ್ಲ. ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗ ಇರುವ ವಿಷಯ ಯಾವುದಂ ಪಾಯಿಂಟ್ ಆಫ್ ಆರ್ಡರ್ ತರುವುದಕ್ಕೆ ?

ಅಧ್ಯಕ್ಷರು.—ಇರಿ, ಅದೇನಂ ಎಂದು ಕೇಳೋಣ.

(ಗೊಂದಲ)

SRI M. RAGHUPATHY.—Sir, as per rule 333 (2), the Speaker may permit a member to raise a point of order during the interval between the termination of one item of business and the commencement of another if it relates to maintenance of order in, or arrangement of business before the House.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ನೀವು ಕೂಡಿರಿ ಪಂಪಾಪತಿಯವರೇ ಅವರ ಪಾಯಿಂಟ್ ಆಫ್ ಆರ್ಡರ್ ಏನಿದೆ ಎಂದು ಕೇಳಲಿಕ್ಕೆ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಯಂ. ಭೂಪತಿ.—ನಾವು ಮಾತನಾಡಲಿಕ್ಕೆ ಎದ್ದನಿಂತರೆ ನಿಮಗೆ ರೂಲ್ಸ್ ಗೊತ್ತಿಲ್ಲ ಎಂದು ಹೇಳುತ್ತೀರಿ ಈಗ ನಮಗೇ ಅನುಮಾನ ಬರುತ್ತಿದೆ. ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ, ಅವರು ಮಾತನಾಡುವುದಕ್ಕೆ ನಾನು ತಕರಾರು ಮಾಡುತ್ತಿಲ್ಲ ಆದರೆ ತಾವು ಈಗ ಶ್ರೀ ಶ್ರೀನಿವಾಸ್ ಅವರನ್ನು ಕರೆದಿದ್ದೀರಿ. ಹೀಗಿರುವಾಗ.....

ಅಧ್ಯಕ್ಷರು.—ಆ ವಿಷಯ ಮುಗಿಯಿತು ಎಂದು ನಾನು ಹೇಳಿ ಈಗ ಶ್ರೀ ಶ್ರೀನಿವಾಸ್ ಅವರನ್ನು ಕರೆದಿರುವುದು ಸರಿ ಆಗ ಇವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಅದು ಏನೆಂದು ಕೇಳುವುದು ಬೇಡವೆ ?

ಶ್ರೀ ಯು. ಭೂಪತಿ.—ಯಾವ ರೂಲ್ಸ್ ಪ್ರಕಾರ ತಾವು ಅವರಿಗೆ ಅವಕಾಶ ಕೊಡುತ್ತಿದ್ದೀರೋ ಗೊತ್ತಿಲ್ಲ.

(ಗೊಂದಲ)

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಮಂತ್ರಿಗಳು ಉತ್ತರ ಹೇಳಿದಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಮಂತ್ರಿಗಳು ಬಾಯಿಗೆ ಬಂದಿದ್ದನ್ನು ಹೇಳಿದರೆ ಅದನ್ನು ಕೇಳುವುದಕ್ಕೆ ನಾವು ತಯಾರಿಲ್ಲ. ಇದು ನಿಯಮಾವಳಿಕ್ಕೆ ವಿರುದ್ಧವಾದದ್ದು. ಇದನ್ನು ತಾವು ಎಕ್ಸಪುಂಜ್ ಮಾಡಬೇಕು.

SMT K. S. NAGARATHNAMMA.—Is that Unparliamentary ? I will repeat it.

ಅಧ್ಯಕ್ಷರು.—ನಾನು ರೆಕಾರ್ಡ್ಸ್ ತರಿಸಿ ನೋಡುತ್ತೇನೆ ಅದು ಅನ್‌ಪಾರ್ಲಿಮೆಂಟರಿ ಹೌದೋ ಅಲ್ಲವೋ ಎಂದು ನೋಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬಾಯಿಗೆ ಬಂದದ್ದನ್ನೇ ಮಾತನಾಡದೆ, ಬಾಯಿಗೆ ಬಾರದೇ ಇದ್ದುದನ್ನು ಹೇಗೆ ಮಾತನಾಡುವುದಕ್ಕೆ ಆಗುತ್ತದೆ ?

ಅಧ್ಯಕ್ಷರು.—ನಾನು ರೆಕಾರ್ಡ್ಸ್ ತರಿಸಿ ನೋಡುತ್ತೇನೆ ಎಂದು ಹೇಳಿದ್ದೇನೆ. ಅನ್‌ಪಾರ್ಲಿಮೆಂಟರಿ ಹೌದೋ ಅಲ್ಲವೋ ಎಂದು ವಿಚಾರ ಮಾಡುತ್ತೇನೆ. ಏಕಸ್ಮಾತ್ತಾಗಿ ಅದು ಅನ್‌ಪಾರ್ಲಿಮೆಂಟರಿ ಹೌದಾದರೆ ಎಕ್ಸಪುಂಜ್ ಮಾಡಿ ಎಂದು ಹೇಳುತ್ತೇನೆ ಇಲ್ಲದಿದ್ದರೆ ಇಲ್ಲ ಅದು ನನ್ನ ಕೈಯೊಳಗೆ ಇದೆ. ಅದನ್ನು ನನಗೆ ಬಿಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಅದನ್ನು ರಿಪೀಟ್ ಮಾಡುತ್ತೇನೆ ಅನ್‌ಪಾರ್ಲಿಮೆಂಟರಿಯಾಗಿದ್ದರೆ ಎಕ್ಸ್‌ಪುಂಜ್ ಮಾಡಿ.

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ ಬಿಡಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಶ್ರೀ ತಿಮ್ಮೇಗೌಡರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರು ಎತ್ತಿದ ತಕ್ಷಣ ಅದನ್ನು ಎಕ್ಸಾಮಿನ್ ಮಾಡುತ್ತೇನೆ ಎಂದು ಹೇಳಿದರೆ ನಮಗೂ ಕೂಡ ಹೇಳುವುದಕ್ಕೆ ಅಧಿಕಾರ ಇದೆ.

ಅಧ್ಯಕ್ಷರು.—ಇಲ್ಲಿ ಸ್ವಲ್ಪ ಕೇಳಿ ನಾನು ಅದು ಅನ್‌ಪಾರ್ಲಿಮೆಂಟರಿ ಹೌದೋ ಅಲ್ಲವೋ ಎಂಬುದನ್ನು ವಿಚಾರ ಮಾಡುತ್ತೇನೆ, ಅದನ್ನು ಪರಿಶೀಲನೆ ಮಾಡುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದರ ಮೇಲೆ ಅಭಿಪ್ರಾಯ ಕೊಡುವುದಕ್ಕೆ ನಮಗೂ ಅಧಿಕಾರ ಇದೆಯಲ್ಲವೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲಿ ಪ್ರಶ್ನೆ ಏನೆಂದರೆ, ಶ್ರೀ ತಿಮ್ಮೇಗೌಡರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ನಾನು ತಮಗೆ ವಿಚಾರ ಮಾಡಲಿಕ್ಕೆ ಅನುಕೂಲವಾಗಲಿ ಎಂದು, ನನ್ನ ಅಭಿಪ್ರಾಯ ಹೇಳುವುದಕ್ಕೂ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ನಾನು ಈಗ ರೂಲಿಂಗ್ ಕೊಡುವುದು ಹಿಂದಿನ ರೆಕಾರ್ಡ್ಸ್ ತರಿಸಿ ನೋಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಮಗೆ ರೂಲಿಂಗ್‌ಗೆ ಸಹಕಾರ ಆಗುವುದಕ್ಕೆ ನನ್ನ ಉದ್ದೇಶವನ್ನೂ ಹೇಳಬೇಕಲ್ಲ ತಾವು ವಿಕಪಕ್ಷೀಯಂವಾಗಿ ಈ ಬಗ್ಗೆ ನಿರ್ಧಾರಕ್ಕೆ ಬರುವುದಕ್ಕೆ ಆಗುವುದಿಲ್ಲ.....

ಅಧ್ಯಕ್ಷರು.—ನಾನೇನು ದಡ್ಡನಲ್ಲ ಬಿ.ಎ. ಎಲ್.ಎಲ್.ಬಿ. ಮಾಡಿಕೊಂಡು, ವಕೀಲನಾಗಿ ಕೆಲಸ ಮಾಡಿದ್ದೇನೆ ನಿಮಗೂ ಅನ್ಯಾಯ ಆಗದ ಹಾಗೆ ಅವರಿಗೂ ಅನ್ಯಾಯ ಆಗದ ಹಾಗೆ ನೋಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದರೂ ಸಹ ತಾವು ಎರಡೂ ಕಡೆ ವಾದವನ್ನೂ ಕೇಳಬೇಕು.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ ನನಗೆ ಗೊತ್ತಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಲ್ಲಿ ಬಿ.ಎ. ಎಲ್.ಎಲ್.ಬಿ. ಆಗತ್ಯ ಇಲ್ಲ It needs only common sense. ಪಾಯಿಂಟ್ ಆಫ್ ಆರ್ಡರ್ ಎತ್ತಲು, ಎದ್ದು, ಎದ್ದು ಕುಳಿತು ಕೊಳ್ಳುವುದಕ್ಕೂ ಒಂದು ವಿತಿ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಕೊಡುವುದಕ್ಕೆ ಅನುಮತಿ ಕೊಟ್ಟಿದ್ದೀರಿ, ನಾವು ಕೊಡುತ್ತೇವೆ. ಅವರ ವಾದವನ್ನು ಕೇಳುವುದಕ್ಕೆ ತಮಗೆ ಸಾರ್ವಭೌಮ ಅಧಿಕಾರ ಇದೆ ಅವರೊಬ್ಬರ ವಾದವನ್ನು ಕೇಳಿ ಮಂತ್ರಿಯೊಂದು ಕಡೆಯ ವಾದವನ್ನು ಕೇಳಬಾರದೆಂದು ತಾವು ಹೇಳಿದರೂ ಸಹ ನಾವು ಸುಮ್ಮನೆ ಕೂಡುತ್ತೇವೆ.

ಅಧ್ಯಕ್ಷರು.—ಅನ್ ಪಾರ್ಲಿಮೆಂಟರಿ ಪದವನ್ನು ಯಾರು ಉಪಯೋಗ ಮಾಡಿದರೂ ಕೂಡ ಅದನ್ನು ನಾನೂ, ಇದು ಅನ್ ಪಾರ್ಲಿಮೆಂಟರಿ ಎಂದು ಹೇಳಿ ಎಕ್ಸ್‌ಪಂಜ್ ಮಾಡುವ ಅಧಿಕಾರ ನನಗಿದೆ. ಅದಕ್ಕೂ ಮೊದಲು ಯಾವುದು ಅನ್ ಪಾರ್ಲಿಮೆಂಟರಿ ಎಂಬುದನ್ನು ನೋಡುವುದು ನನ್ನ ಕರ್ತವ್ಯ.

ಶ್ರೀ ಎಂ. ವೀರಪ್ಪ ಮೊಯಿಲಿ.— ತಾವು "ಹೌದು" ಎನ್ನುವ ವಾದ ಕೇಳಿದ್ದೀರಿ. ಹಾಗೆಯೇ, "ಅಲ್ಲ" ಎನ್ನುವ ವಾದ ಕೇಳಬಾರದು, ನೀವು ಕೂಡಿ ಎಂದರೆ ನಾವು ಕೂಡುತ್ತೇವೆ. ಎರಡೂ ಕಡೆ ವಾದ ಕೇಳಬೇಕಾದ ಅವಶ್ಯಕತೆ ಇಲ್ಲ, ಒಂದೇ ಕಡೆ ವಾದ ಕೇಳುವುದು ಎಂದು ತಾವು ಹೇಳಿದರೆ, ಶ್ರೀ ತಿಮ್ಮೇಗೌಡರು ಹೇಳಿದ ವಿಷಯದಲ್ಲಿ ಪುಷ್ಟಿ ಇಲ್ಲ ಎಂದು ತಿಳಿದುಕೊಂಡೂ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು. — ಆಯಿತ , ಕುಳಿತುಕೊಳ್ಳಿ.

4. ಬೆಂಗಳೂರಿನ ನಂದಿನಿ ಲೇ ಔಟಿನ ಸಮೀಪದಲ್ಲಿರುವ ಜಾರಕ ಬಂಡೆ ಕಾವಲಿನಲ್ಲಿ ಅನಧಿಕೃತವಾಗಿ ಕಟ್ಟಿರುವ ಮನೆಗಳನ್ನು ಕೆಡವಿಹಾಕಿರುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).— ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ನಂದಿನಿ ಲೇಔಟ್‌ನ ಸಮೀಪದಲ್ಲಿರುವ ಜಾರಕ ಬಂಡೆ ಕಾವಲಿನಲ್ಲಿ ಅನಧಿಕೃತವಾಗಿ ಕಟ್ಟಿದ ಸುಮಾರು ೨೧೦ ಮನೆಗಳನ್ನು ಕೆಡವಿ ಹಾಕಿರುವ ಬಗ್ಗೆ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಸನ್ಮಾನ್ಯ ಅಧ್ಯಕ್ಷರೇ,

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಂ ನಂದಿನಿ ಬಡಾವಣೆ ಸಮೀಪದ ಜಾರಕ ಬಂಡೆ ಕಾವಲಿನಲ್ಲಿ ಅಧಿಕೃತವಾಗಿ ಕಟ್ಟಿದ್ದ ಯಾವ ಮನೆಗಳನ್ನೂ ಒಡೆದು ಹಾಕಿರುವುದಿಲ್ಲ. ಆದರೆ ಮಂಡಳಿಗೆ ಸೇರಿದ ಲಗ್ಗೆರೆ ಗ್ರಾಮದ ೧೧೫ನೆಯ ಮತ್ತು ೧೨ನೇ ಸರ್ವೆ ನಂಬರಿನ ಜಮೀನಿನಲ್ಲಿದ್ದ ೫೭ ಸಣ್ಣ ಮನೆಗಳನ್ನು ದಿನಾಂಕ. ೧೭-೨-೧೯೮೭ರಂದು ಒಡೆದಂ ಹಾಕಲಾಗಿದ್ದು, ಇದರ ವಿವರಗಳು ಈ ಕೆಳಕಂಡಂತಿವೆ,

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ೫೯ ಎಕರೆ ೨೮ ಗುಂಟೆ ವಿಸ್ತೀರ್ಣದ ಲಗ್ಗೆರೆ ಗ್ರಾಮಕ್ಕೆ ಸೇರಿದ ೧೧ ಮತ್ತು ೧೨ನೇ ಸರ್ವೆ ನಂಬರಿನ ಜಮೀನನ್ನು (ಸರ್ವೆ ನಂಬರ್ ೧೧ರಲ್ಲಿ ೩೫ ಎಕರೆ ೫ ಗುಂಟೆ ಹಾಗೂ ಸರ್ವೆ ನಂಬರ್ ೧೨ರಲ್ಲಿ ೨೪ ಎಕರೆ ೨೩ ಗುಂಟೆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ೮ ೮೫ ಲಕ್ಷ ರೂ. ಗಳಿಗೆ ಪಡೆದಿರುತ್ತದೆ. ಈ ಜಮೀನನ್ನು ಬೆಂಗಳೂರು ಅಭಿವೃದ್ಧಿ